ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**Karnataka Examinations Authority**

No. ED/KEA/UGCET-UGNEET/2025 Date: 30-08-2025

***ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಕೃಷಿ ವಿಜ್ಞಾನ, ವೆಟರಿನರಿ, ಬಿಎಸ್‌ಸಿ (ನರ್ಸಿಂಗ್) ಬಿ-ಫಾರ್ಮ, ಫಾರ್ಮ್-ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳಿಗೆ ಮತ್ತು ಆಯುಷ್ ಕೋರ್ಸುಗಳು ಸೇರಿದಂತೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ***

ವೈದ್ಯಕೀಯ ಸೀಟುಗಳ ಅಖಿಲ ಭಾರತ ಎರಡನೇ ಸುತ್ತಿನ ವೇಳಾಪಟ್ಟಿ ಪರಿಷ್ಕರಣೆ ಹಂತದಲ್ಲಿ ಇರುವುದರಿಂದ ಮತ್ತು ಇನ್ನೂ ಕೆಲವು ದಿನಗಳವರೆಗೆ ವಿಳಂಬವಾಗುತ್ತಿರುವುದರಿಂದ, ಯುಜಿಸಿಇಟಿ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಎರಡನೇ ಸುತ್ತಿನಲ್ಲಿ ಯುಜಿಸಿಇಟಿ ಕೋರ್ಸುಗಳಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ನಾಲ್ಕು CHOICE ಗಳನ್ನು ನೀಡಲಾಗುವುದು.

**ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶದ ನಂತರದ ಸೂಚನೆಗಳು**

ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ಅಭ್ಯರ್ಥಿಗಳಿಗೆ ಈ ಕೆಳಗೆ ವಿವರಿಸಿರುವಂತೆ ನಿರ್ಣಯಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ವಿವಿಧ ನಾಲ್ಕು **CHOICE** ಗಳನ್ನು ನೀಡಲಾಗುವುದು. ಅಭ್ಯರ್ಥಿಗಳು ನಾಲ್ಕು **CHOICE** ಗಳಲ್ಲಿ ತಮಗೆ ಸರಿ ಎನಿಸುವ ಯಾವುದಾದರೂ ಒಂದು **CHOICE** ಅನ್ನು ಆಯ್ಕೆ ಮಾಡುವ ಮೊದಲು, ಪ್ರತಿ **CHOICE** ಗಳ ವಿವರಣೆಯನ್ನು ಓದಿ ಸರಿಯಾಗಿ ಅರ್ಥೈಸಿಕೊಂಡು, ತಮ್ಮ ಪೋಷಕರೊಡನೆ ಚರ್ಚಿಸಿ ಅಭ್ಯರ್ಥಿಯು ತನಗೆ ಸೂಕ್ತವೆನಿಸಿದ **CHOICE** ಅನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ. ನಾಲ್ಕು **CHOICE** ಗಳಲ್ಲಿ ಯಾವುದೇ **CHOICE** ಅನ್ನು ಆಯ್ಕೆ ಮಾಡದಿರುವ ಅಭ್ಯರ್ಥಿಗಳು ಮುಂದಿನ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುವುದಿಲ್ಲ.

**OPTIONS** ಗಳನ್ನು ನೀಡಿ ಆದರೆ ಯಾವುದೇ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳಿಗೆ ಯಾವುದೇ **CHOICE** ಅನ್ನು ಆಯ್ಕೆ ಮಾಡುವ ಅವಕಾಶ ಇರುವುದಿಲ್ಲ.

- ಎರಡನೇ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟಿಗೆ ಅಭ್ಯರ್ಥಿಗಳು, **CHOICE-1** ಅನ್ನು ಆಯ್ಕೆ ಮಾಡಿದಲ್ಲಿ, ಅಂತಹ ಅಭ್ಯರ್ಥಿಗಳನ್ನು ಯುಜಿಸಿಇಟಿ ಕೋರ್ಸುಗಳಿಗೆ ಅಥವಾ ಯುಜಿನೀಟ್ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ.
- ಒಂದು ವೇಳೆ ಅಭ್ಯರ್ಥಿಗಳು ತನಗೆ ಹಂಚಿಕೆಯಾದ ಸೀಟು ತೃಪ್ತಿಕರವಾಗಿದ್ದು, ಯಾವುದೇ ಬದಲಾವಣೆ ಬೇಡ ಎಂದೆನಿಸಿದಲ್ಲಿ ಮಾತ್ರ **CHOICE-1** ಅನ್ನು ಆಯ್ಕೆ ಮಾಡಬಹುದು. ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು **CHOICE-1** ಅನ್ನು ಆಯ್ಕೆ ಮಾಡಲು ಸೂಚಿಸಿದೆ.
- **CHOICE-2** ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಯಾವುದೇ ಡಿಸಿಪ್ಲಿನ್‌ನಲ್ಲಿ ಅಥವಾ ಯಾವುದೇ ವರ್ಗದಲ್ಲಿ ಸೀಟು ಹಂಚಿಕೆಯಾಗಿದ್ದಲ್ಲಿ 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಪಡೆಯಲು ನಿಗದಿತ ಶುಲ್ಕವನ್ನು ಪಾವತಿಸಬೇಕು.
- **CHOICE-3** ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ. ***ಆದರೆ 3ನೇ ಸುತ್ತಿನಲ್ಲಿ ಭಾಗವಹಿಸಲು ರೂ.10,000/- Caution Deposit ಅನ್ನು ಪಾವತಿಸಬೇಕು.***

**ಗಮನಿಸಿ:** ಯುಜಿಸಿಇಟಿ ಕೋರ್ಸುಗಳ 3ನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳಿಗೆ ಯಾವುದೇ ಛಾಯ್ಸ್ ಗಳು ಆಯ್ಕೆ ಮಾಡಲು ಅವಕಾಶ ಇರುವುದಿಲ್ಲ. ಅಭ್ಯರ್ಥಿಗಳು ಕಡ್ಡಾಯವಾಗಿ ಹಂಚಿಕೆಯಾದ ಸೀಟಿಗೆ ಪ್ರವೇಶವನ್ನು ಪಡೆಯಬೇಕು, ಆದ್ದರಿಂದ ಅಭ್ಯರ್ಥಿಗಳು ಮತ್ತು ಪೋಷಕರು ಕಾಲೇಜಿಗೆ ಸೇರ ಬಯಸುವ ಇಷ್ಟವಿರುವ ಕಾಲೇಜುಗಳನ್ನು ಮಾತ್ರ ದಾಖಲಿಸಬೇಕು, ಏಕೆಂದರೆ ಮೆರಿಟ್ ಆಧಾರದ ಮೇಲೆ ಹಾಗು ಅಭ್ಯರ್ಥಿಗಳು ದಾಖಲಿಸುವ options ಗಳನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡುವುದರಿಂದ ಹಂಚಿಕೆಯಾದ ಸೀಟನ್ನು ನಿರಾಕರಿಸುವಂತಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಚ್ಚರದಿಂದ options ಗಳನ್ನು ಆದ್ಯತೆಯ ಕ್ರಮಾಂಕದಲ್ಲಿ ಸಲ್ಲಿಸಬೇಕು. 3ನೇ ಸುತ್ತಿನ ಸೀಟು ಹಂಚಿಕೆಯ ನಂತರ ಶುಲ್ಕ ಪಾವತಿಸಲು ಅಥವಾ ಕಾಲೇಜಿನಲ್ಲಿ ಪ್ರವೇಶ ಪಡೆಯಲು ವಿಫಲನಾದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಮತ್ತು ಮುಂದಿನ ಮೂರು ವರ್ಷಗಳವರೆಗೆ ಸದರಿ ಕೋರ್ಸಿಗೆ ಅವಕಾಶ ನೀಡುವುದಿಲ್ಲ.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**

18th Cross, Sampige Road, Malleshwaram, Bengaluru - 560 012.

Phone: 080 - 23 564 583 Helpline : 080 - 23 460 460.

e-mail : keauthority-ka@nic.in Website : http://kea.kar.nic.in

ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳ **CHOICES** ಗಳ ವಿವರಣೆ

**CHOICE-1** – ನನಗೆ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಶೇ.100 ರಷ್ಟು ಇಷ್ಟವಾಗಿದ್ದು ನಾನು ಕಾಲೇಜಿಗೆ ಸೇರುತ್ತೇನೆ, ನನಗೆ ಯಾವುದೇ ಬದಲಾವಣೆ ಅವಶ್ಯಕತೆ ಇರುವುದಿಲ್ಲ. ಮುಂದಿನ ಸುತ್ತುಗಳಲ್ಲಿ (ಯುಜಿನೀಟ್ ವೈದ್ಯಕೀಯ ಅಥವಾ ದಂತ ವೈದ್ಯಕೀಯ ಅಥವಾ ಆಯುಷ್ ಅಥವಾ ಇಂಜಿನಿಯರಿಂಗ್ / ಆರ್ಕಿಟೆಕ್ಚರ್ / ಫಾರ್ಮ ಸೈನ್ಸ್ / ವೆಟರಿನರಿ / ಫಾರ್ಮಸಿ / ಬಿಎಸ್‌ಸಿ ನರ್ಸಿಂಗ್, ನ್ಯಾಚರೋಪತಿ ಮತ್ತು ಯೋಗ, ಅಲೈಡ್ ಹೆಲ್ತ್ ಸೈನ್ಸ್ ಮುಂತಾದ ಕೋರ್ಸುಗಳಿಗೆ) ಭಾಗವಹಿಸಲೂ ಸಹ ನನಗೆ ಇಷ್ಟವಿರುವುದಿಲ್ಲ, ಆದ್ದರಿಂದ ನನ್ನನ್ನು ಮುಂದಿನ ಯಾವುದೇ ಸುತ್ತುಗಳಲ್ಲಿ ಸೀಟು ಹಂಚಿಕೆಗೆ ಪರಿಗಣಿಸಬಾರದು. ನಾನು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ, Confirmation Slip ಅನ್ನು ಡೌನ್‌ಲೋಡ್ ಮಾಡಿಕೊಂಡು ನಂತರ ಸೀಟು ಹಂಚಿಕೆಯಾದ ಕಾಲೇಜಿನ ಪೋರ್ಟಲ್ ಲಾಗಿನ್ ಮೂಲಕ ಒಟಿಪಿ ಪಡೆದು, Online Face Recognition ಮಾಡಿ, ಕಾಲೇಜಿನಲ್ಲಿ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿ, ನಿಗದಿತ ದಿನಾಂಕದೊಳಗೆ ಪ್ರವೇಶ ಪಡೆಯುತ್ತೇನೆ ಎಂದು ಧೃಡೀಕರಿಸುತ್ತೇನೆ.

ಕ್ರಮ: ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸುವುದಾಗಿದ್ದರೆ, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ CHOICE-1 ಅನ್ನು ಆಯ್ಕೆ ಮಾಡಿಕೊಂಡು ಮುಂದಿನ ಕ್ರಮವಹಿಸಬಹುದು.

ಪರಿಣಾಮ: ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.

ಛಾಯ್ಸ್–1 ಆಯ್ಕೆ ಮಾಡಿದ ಅಭ್ಯರ್ಥಿಯು ಶುಲ್ಕವನ್ನು ಪಾವತಿಸಲು ವಿಫಲನಾ/ಳಾದಲ್ಲಿ ಅಥವಾ ಶುಲ್ಕ ಪಾವತಿಸಿ Seat Confirmation Slip ಅನ್ನು ಡೌನ್‌ಲೋಡ್ ಮಾಡಲು ವಿಫಲನಾ/ಳಾದಲ್ಲಿ ಅಥವಾ ಕಾಲೇಜಿಗೆ ವರದಿ ಮಾಡಲು ವಿಫಲರಾದಲ್ಲಿ ಅಂತಹ ಅಭ್ಯರ್ಥಿಗಳನ್ನು ಮುಂದಿನ ಸುತ್ತುಗಳ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ; ಪಾವತಿಸಿದ ಶುಲ್ಕವಿದ್ದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಮುಖ್ಯವಾದುದು: CHOICE-1ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಮುಂದಿನ UGCET-2025 / UGNEET-2025 ಪ್ರವೇಶಾತಿಯ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುವುದಿಲ್ಲ.

CHOICE-1 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

- ✓ ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಗಳು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದ್ದಲ್ಲಿ, CHOICE-1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.
- ✓ ನಂತರ ಅದೇ ವೆಬ್ ಸೈಟ್‌ನಿಂದಲೇ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಂಡು / ಪ್ರಿಂಟ್ ತೆಗೆದುಕೊಳ್ಳಬೇಕು.
- ✓ ಚಲನ್‌ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳು ಅಂದರೆ, ಅಭ್ಯರ್ಥಿಯ ಹೆಸರು, ಸಿಇಟಿ ಸಂಖ್ಯೆ, ಆಯ್ಕೆಯಾಗಿರುವ ಕಾಲೇಜು ಮತ್ತು ಕೋರ್ಸಿನ ವಿವರ, ಅಭ್ಯರ್ಥಿಯು ಪಾವತಿಸಬೇಕಾದ ಶುಲ್ಕ, ಬ್ಯಾಂಕ್ ಖಾತೆ ಸಂಖ್ಯೆ ಇವೆಲ್ಲವನ್ನೂ ಮುದ್ರಿಸಲಾಗುವುದು. ಅಭ್ಯರ್ಥಿಯು ಸರಿಯಾಗಿದೆ ಎಂದು ಪರಿಶೀಲಿಸಿ ಸಹಿ ಮಾಡಬೇಕು. ನಂತರ ನಿಗದಿತ ಶುಲ್ಕವನ್ನು ಪಾವತಿಸಬೇಕು.
- ✓ ನಂತರ Seat Confirmation Slip ಅನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗಾಗಿ ಪ್ರವೇಶಾತಿ ಪಡೆಯಲು ಅಭ್ಯರ್ಥಿಗಳು ಖುದ್ದಾಗಿ ಎಲ್ಲಾ ಮೂಲ ದಾಖಲೆಗಳೊಂದಿಗೆ (ಎರಡು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ) ಆಯಾ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು.
- ✓ ಕಾಲೇಜಿನವರು ಎಲ್ಲ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿ ನಂತರ, ಅವರ ಅಧಿಕೃತ ಲಾಗಿನ್‌ನಲ್ಲಿ (College Portal) ಅಭ್ಯರ್ಥಿಯ ವಿವರಗಳನ್ನು ಪಡೆದು, ಫೋಟೋ (Online Face Recognition) ಪರಿಶೀಲಿಸಿ ನಂತರ ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ವಾಟ್ಸಾಪ್ ಮೂಲಕ ಒಟಿಪಿ ಕಳುಹಿಸಲಾಗುತ್ತದೆ.
- ✓ ಒಟಿಪಿ ವೆರಿಫಿಕೇಶನ್ ಮಾಡಿದ ನಂತರ Admission Order ಅನ್ನು ಕಾಲೇಜಿನವರು ಅವರ ಪೋರ್ಟಲ್‌ನಲ್ಲಿಯೇ ಡೌನ್‌ಲೋಡ್ ಮಾಡುತ್ತಾರೆ, ಅಭ್ಯರ್ಥಿಯ ಪ್ರತಿಯನ್ನು ಪಡೆದುಕೊಳ್ಳಬೇಕು.(ಅಭ್ಯರ್ಥಿಗಳು Admission Order ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ)
- ✓ ನಂತರ ಪ್ರವೇಶ ಪತ್ರದಲ್ಲಿ ನಿಗದಿ ಪಡಿಸಿದ ಜಾಗದಲ್ಲಿ ಅಭ್ಯರ್ಥಿಯು ಸಹಿಯನ್ನು ಮಾಡಬೇಕು ಹಾಗೂ ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸಬೇಕು.
- ✓ ಈ ಹಂತಗಳ ನಂತರ ಅಭ್ಯರ್ಥಿಯ ಪ್ರವೇಶಾತಿ ಪ್ರಕ್ರಿಯೆ ಪೂರ್ಣವಾಗುತ್ತದೆ ಮತ್ತು ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.

CHOICE-1 ಅಭ್ಯರ್ಥಿಗಳು ಪಾಲಿಸಬೇಕಾದ ಹಂತಗಳು – ನಿಯಮಗಳು

ಮೊದಲನೇ ಹಂತ – ಶುಲ್ಕ ಪಾವತಿ (ಹಿಂದಿನ ಸುತ್ತಿನಲ್ಲಿ ಛಾಯ್ಸ್-2 ಅಭ್ಯರ್ಥಿಗಳು ಶುಲ್ಕ ಪಾವತಿಸಿದ್ದರೆ ಹೊಂದಾಣಿಕೆ ಮಾಡಲಾಗುತ್ತದೆ)

ಎರಡನೇ ಹಂತ – Confirmation Slip ಅನ್ನು ಡೌನ್‌ಲೋಡ್ ಮಾಡುವುದು

ಮೂರನೇ ಹಂತ – ಖುದ್ದಾಗಿ ಕಾಲೇಜಿಗೆ ಪ್ರವೇಶಾತಿ ಪಡೆಯಲು ವರದಿ ಮಾಡಿಕೊಳ್ಳುವುದು (ಎಲ್ಲಾ ಮೂಲ ದಾಖಲೆಗಳು ಮತ್ತು ಮೊಬೈಲ್‌ನೊಂದಿಗೆ)

ನಾಲ್ಕನೇ ಹಂತ – Online ಫೋಟೋ (Face Recognition) ಪರಿಶೀಲನೆ – ನಂತರ ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ವಾಟ್ಸಾಪ್ ಮೂಲಕ ಕಳುಹಿಸಿದ ಒಟಿಪಿ ಪರಿಶೀಲನೆ

ಐದನೇ ಹಂತ – ಒಟಿಪಿ ವೆರಿಫಿಕೇಶನ್ ಮಾಡಿದ ನಂತರ Admission Order ಅನ್ನು ಕಾಲೇಜಿನವರು ಅವರ ಪೋರ್ಟಲ್ ನಲ್ಲಿಯೇ ಡೌನ್‌ಲೋಡ್ ಮಾಡುವುದು.

ಈ ಮೇಲಿನ ಎಲ್ಲ ಹಂತಗಳನ್ನು ಕಡ್ಡಾಯವಾಗಿ ಪಾಲಿಸಿದ ನಂತರವೇ ಪ್ರವೇಶಾತಿ ಮುಕ್ತಾಯ ಎಂದು ಪರಿಗಣಿಸಲ್ಪಡುತ್ತದೆ

**CHOICE-2**– ನನಗೆ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ಇಷ್ಟವಾಗಿರುತ್ತದೆ ಆದರೆ ನಾನು ಇನ್ನೂ ಉತ್ತಮವಾದ ಸೀಟನ್ನು ಪಡೆಯಲು 3ನೇ ಸುತ್ತಿನಲ್ಲಿ ಭಾಗವಹಿಸುತ್ತೇನೆ. ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರಾಧಿಕಾರದ ವೆಬ್‌ಸೈಟಿನಿಂದ ಚಲನ್ ಡೌನ್‌ಲೋಡ್ ಮಾಡಿ ಶುಲ್ಕವನ್ನು ಪಾವತಿಸುತ್ತೇನೆ. ಅಭ್ಯರ್ಥಿಗೆ ಯುಜಿಸಿಇಟಿ ಕೋರ್ಸುಗಳಾದ ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಫಾರ್ಮ ಸೈನ್ಸ್, ವೆಟರಿನರಿ, ಬಿ–ಫಾರ್ಮ, ಫಾರ್ಮ–ಡಿ, ಬಿಎಸ್‌ಸಿ (ನರ್ಸಿಂಗ್), ನ್ಯಾಚುರೋಪತಿ ಮತ್ತು ಯೋಗ ಸೀಟುಗಳಲ್ಲಿ ಎರಡನೇ ಸುತ್ತಿನಲ್ಲಿ ಯಾವುದೇ ಡಿಸಿಪ್ಲೀನ್‌ನಲ್ಲಿ ಅಥವಾ ಯಾವುದೇ ವರ್ಗದಲ್ಲಿ ಸೀಟು ಹಂಚಿಕೆಯಾಗಿದ್ದಲ್ಲಿ 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಪಡೆಯಲು ನಿಗದಿತ ಶುಲ್ಕವನ್ನು ಪಾವತಿಸಬೇಕು.

ಕ್ರಮ: ಮುಂದಿನ 3ನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ **higher order options** ಗಳಲ್ಲಿ ಯಾವುದೇ ಸೀಟು ಹಂಚಿಕೆಯಾದಲ್ಲಿ, 3ನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಬೇಕು. ಒಂದುವೇಳೆ ಮುಂದಿನ 3ನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ **higher order options** ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ, ಈಗಾಗಲೇ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯಲು ಇಚ್ಛಿಸುತ್ತೇನೆ ಎಂದು ದೃಢೀಕರಿಸುತ್ತೇನೆ. ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ನಿರ್ಧರಿಸುವುದಾಗಿದ್ದರೆ / ಕ್ರಮವಹಿಸುವುದಾಗಿದ್ದರೆ, ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್‌ನಲ್ಲಿ **CHOICE 2** ಅನ್ನು ಆಯ್ಕೆ ಮಾಡಿಕೊಂಡು 3ನೇ ಸುತ್ತಿನಲ್ಲಿ ಭಾಗವಹಿಸಬಹುದು.

**ಮುಖ್ಯವಾದುದು:** ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ತಮ್ಮ ಬಳಿ ಇಟ್ಟುಕೊಂಡು (Hold ಮಾಡಿ) ಶುಲ್ಕ ಪಾವತಿಸಿ 3ನೇ ಸುತ್ತಿನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳಿಗೆ 3ನೇ ಸುತ್ತಿನಲ್ಲಿ **higher order options** ಗಳಿಗೆ ಮಾತ್ರ ಸೀಟು ಆಯ್ಕೆಗೆ ಪರಿಗಣಿಸಲಾಗುವುದು.

ವಿವರಣೆ: CHOICE-2 ಅಭ್ಯರ್ಥಿಗಳು 3ನೇ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸಿರುತ್ತಾರೆ ಎಂದರೆ 3ನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗಿಂತ ಉತ್ತಮವಾದ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಭಾಗವಹಿಸುತ್ತಾರೆ. 3ನೇ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಮೇಲ್ಪಟ್ಟ ಆದ್ಯತೆಗಳ ಸೀಟು ಅಂದರೆ ಹಂಚಿಕೆಯಾದ ಸೀಟಿನ ಮೇಲ್ಪಟ್ಟ ಇಚ್ಛೆ / ಆಯ್ಕೆಗಳು (Higher order Options means, options entered above the allotted option) ದೊರಕದಿದ್ದಲ್ಲಿ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟೇ ಉಳಿಯುತ್ತದೆ. ಒಂದುವೇಳೆ 3ನೇ ಸುತ್ತಿನಲ್ಲಿ ಮೆರಿಟ್ ಹಾಗು ಅಭ್ಯರ್ಥಿಗಳು ಮೇಲ್ಪಟ್ಟ ಇಚ್ಛೆ / ಆಯ್ಕೆಗಳಲ್ಲಿ ಆದ್ಯತಾ ಕ್ರಮದಲ್ಲಿ ಉಳಿಸಿಕೊಳ್ಳುವ ಸೀಟು ದೊರೆತಲ್ಲಿ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ತಂತಾನೆ ರದ್ದುಗೊಂಡು ಸೀಟ್ ಮ್ಯಾಟ್ರಿಕ್ಸ್ ಪೂಲ್‌ಗೆ ಸೇರ್ಪಡೆಯಾಗಿ ನಂತರದ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು. 3ನೇ ಸುತ್ತಿನಲ್ಲಿ ಹೊಸದಾಗಿ ಹಂಚಿಕೆಯಾಗುವ ಸೀಟನ್ನೇ ಕಡ್ಡಾಯವಾಗಿ ಪಡೆಯಬೇಕು.

**ಗಮನಿಸಿ:** 3ನೇ ಸೀಟು ಹಂಚಿಕೆಯ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಅಭ್ಯರ್ಥಿಯ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

**CHOICE-2 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- 3ನೇ ಸುತ್ತಿನ ಇಚ್ಛೆ / ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ higher order options ಗಳನ್ನು ಮಾತ್ರ ತೋರಿಸಲಾಗುವುದು, ಅಭ್ಯರ್ಥಿಗಳು higher order options ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಬಹುದು.
- **CHOICE-2** ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ತಮ್ಮೊಡನೆ ಉಳಿಸಿಕೊಂಡು 3ನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಅಂದರೆ Higher Order Options ಹಂಚಿಕೆಯಾದಲ್ಲಿ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ. 3ನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಎರಡನೇ ಸುತ್ತಿನಲ್ಲಿ ಪಡೆದ ಸೀಟು ಅವರ ಬಳಿಯೇ ಇರುತ್ತದೆ.
- Higher Order Options ಅಂದರೆ, ಒಬ್ಬ ಅಭ್ಯರ್ಥಿಯು 87 ಆಪ್ಷನ್‌ಗಳನ್ನು ದಾಖಲಿಸಿದ್ದಲ್ಲಿ, ಇವುಗಳ ಪೈಕಿ ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗೆ 43 ನೇ ಕ್ರಮಾಂಕದ ಆಪ್ಷನ್ ನ ಸೀಟು ದೊರಕಿದೆ ಎಂದು ಭಾವಿಸಿದಲ್ಲಿ, 1 ರಿಂದ 42 ನೇ ಆಪ್ಷನ್‌ಗಳ ಸೀಟುಗಳು Higher Order Options ಆಗುತ್ತದೆ. 3ನೇ ಸುತ್ತಿನಲ್ಲಿ ಈ ಮೇಲಿನ ಯಾವುದೇ ಆಪ್ಷನ್‌ಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ.
- Higher Order Options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಅಭ್ಯರ್ಥಿಯ ಹೆಸರಿನಲ್ಲಿರುತ್ತದೆ.
- ಅಭ್ಯರ್ಥಿಯು ಅವರ option portal ನಲ್ಲಿ ಅನಗತ್ಯ options ಗಳು ಇದೆ ಎಂದು ತೀರ್ಮಾನಿಸಿದಲ್ಲಿ, ಪೋಷಕರೊಡನೆ ಚರ್ಚಿಸಿ ಅಂತಹ options ಗಳನ್ನು ಅಳಿಸಬಹುದು ಎಂದು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

**CHOICE-3:** ಅಭ್ಯರ್ಥಿಯು ತನಗೆ ಎರಡನೇ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ, ನಾನು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟನ್ನು ರದ್ದುಪಡಿಸಿಕೊಂಡು 3ನೇ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ಧೃಡೀಕರಿಸುತ್ತೇನೆ. **ಹಾಗೂ 3ನೇ ಸುತ್ತಿನಲ್ಲಿ ಭಾಗವಹಿಸಲು ರೂ.10,000/- Caution Deposit ಅನ್ನು ಪಾವತಿಸುತ್ತೇನೆ.**

ಕ್ರಮ: ಅಭ್ಯರ್ಥಿಗಳು ಈ ಮೇಲಿನ ರೀತಿಯಲ್ಲಿ ಕ್ರಮವಹಿಸಲು ನಿರ್ಣಯಿಸಿದರೆ **CHOICE-3** ಅನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಮುಖ್ಯವಾದುದು:

*(a)* CHOICE-3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ. ***ಆದರೆ 3ನೇ ಸುತ್ತಿನಲ್ಲಿ ಭಾಗವಹಿಸಲು ರೂ.10,000/- Caution Deposit ಅನ್ನು ಪಾವತಿಸಬೇಕು.***

(b) CHOICE-3 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) 3ನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ 3ನೇ ಸುತ್ತಿನಲ್ಲಿ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರು ಸೀಟನ್ನು ಆಯ್ಕೆ ಮಾಡಿಕೊಳ್ಳಬೇಕು.

(c) 3ನೇ ಸುತ್ತಿನಲ್ಲಿ ಇಚ್ಛೆ/ ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ option entry portal ನಲ್ಲಿ ಕಡ್ಡಾಯವಾಗಿ ಲಾಗಿನ್ ಮಾಡಿ ಒಪ್ಪಿಗೆ ನೀಡಿದ ನಂತರ CHOICE-3 ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗಳು ದಾಖಲಿಸಿದ ಎಲ್ಲಾ options ಗಳನ್ನು ತೋರಿಸಲಾಗುವುದು (ಎರಡನೇ ಸುತ್ತಿನಲ್ಲಿ ಹಂಚಿಕೆಯಾಗಿ ಅಭ್ಯರ್ಥಿಯು ರದ್ದುಪಡಿಸಿಕೊಂಡ option ಅನ್ನು ಹೊರತುಪಡಿಸಿ ಉಳಿದ ಎಲ್ಲಾ ಇಚ್ಛೆ / ಆಯ್ಕೆಗಳು).

(d) ಅಭ್ಯರ್ಥಿಗಳು options ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಬಹುದು. ನೀವು ತೆಗೆದು ಹಾಕುವ options ಗಳು ನಿಮ್ಮ ಎಡಭಾಗದ ಸ್ಕ್ರೀನ್ ನಲ್ಲಿಯೇ ಇರುತ್ತದೆ ಮತ್ತು ಅಂತಹ options ಗಳನ್ನು ಪರಿಗಣಿಸುವುದಿಲ್ಲ. ಅಂದರೆ ಯಾವುದೇ options ಗಳನ್ನು ಬದಲಾಯಿಸಿಕೊಳ್ಳಬಹುದು ಅಥವಾ ಆದ್ಯತಾ ಕ್ರಮಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಬಹುದು.

**ಗಮನಿಸಿ:** 3ನೇ ಸುತ್ತಿನ ಸೀಟು ಹಂಚಿಕೆಯ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ಅಭ್ಯರ್ಥಿಯ ರ್‍ಯಾಂಕ್ ಸರದಿಯ ನಂತರ ಉದ್ಭವಿಸುವ ಸೀಟುಗಳನ್ನು ಪಡೆಯಲು ಹಕ್ಕನ್ನು ಚಲಾಯಿಸುವಂತಿಲ್ಲ.

**CHOICE-3 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.**

- **CHOICE**-3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ. **CHOICE**-3 ಅಭ್ಯರ್ಥಿಗಳಿಗೆ ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಇಷ್ಟವಿರುವುದಿಲ್ಲ.
- ಲಾಗಿನ್ ಮಾಡಿ ಒಪ್ಪಿಗೆ ನೀಡಿದ ನಂತರ ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ದಾಖಲಿಸಿದ options ಗಳನ್ನು ಮಾರ್ಪಡಿಸಿಕೊಳ್ಳಬಹುದು ಅಥವಾ ಯಾವುದಾದರೂ options ಬೇಡವಾದಲ್ಲಿ ತೆಗೆದು ಹಾಕಲು ಅವಕಾಶ ನೀಡಲಾಗುವುದು.
- **CHOICE**-3 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) 3ನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರು ಸೀಟನ್ನು ಆಯ್ಕೆ ಮಾಡಿಕೊಳ್ಳಬೇಕು.
- ಅಭ್ಯರ್ಥಿಯು ಅವರ option portal ನಲ್ಲಿ ಅನಗತ್ಯ options ಗಳು ಇದೆ ಎಂದು ತೀರ್ಮಾನಿಸಿದಲ್ಲಿ, ಪೋಷಕರೊಡನೆ ಸಮಾಲೋಚಿಸಿ ಅಂತಹ options ಗಳನ್ನು ಅಳಿಸಬಹುದು ಎಂದು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

**CHOICE-4:** ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ಹಂಚಿಕೆಯಾಗಿರುವ ಸೀಟು ತೃಪ್ತಿಕರವಾಗಿಲ್ಲ, ನನಗೆ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ,

**ಕ್ರಮ: ಅಭ್ಯರ್ಥಿಗಳು** ಈ ಮೇಲಿನಂತೆ ನಿರ್ಣಯಿಸಿದಲ್ಲಿ, **CHOICE**-4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬಹುದು.

ಗಮನಿಸಿ: **CHOICE**-4 ಅನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಯು 2025ರ **ಕೋರ್ಸುಗಳ** ಸೀಟು ಹಂಚಿಕೆಗೆ ಮುಂದಿನ ಯಾವುದೇ ಸುತ್ತುಗಳಲ್ಲಿ ಭಾಗವಹಿಸಲು ಅರ್ಹನಾಗುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು